# ಇಲಿ ಬೇಟೆ

ಯುಗಾದಿ ಪ್ರಬಂಧ ಸ್ಪರ್ಧೆ 2024

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಶಿವರಾಜ್ ಬ್ಯಾಡರಹಳ್ಳಿ


ಕಲೆ: ಸಂತೋಷ್ ಸಸಿಹಿತ್ಲು

ನಮ್ಮ ಬಯಲುಸೀಮೆಯ ಜನ ಬಡತನ ಬವಣೆಗಳಿಂದ ನರಳಿ ವರ್ಷ ಪೂರ್ತಿ ದುಡಿದು ಹೈರಾಣಾಗುವುದು, ಮುಂಗಾರು ಮಳೆ ಬಿದ್ದ ಮೇಲೆ ಮತ್ತೆ ಮೈ ಕೊಡವಿ ಎದ್ದೇಳುವುದು ಹಲವು ವರ್ಷಗಳಿಂದ ಸಾಮಾನ್ಯವಾಗಿದೆ. ನಮ್ಮದು ಬರಡು ಭೂಮಿಯಲ್ಲದಿದ್ದರೂ ರಾಗಿ, ಹುರುಳಿ, ಅವರೆ, ತೊಗರಿ ಕಾಳು ಬೆಳೆದುಕೊಂಡು ಕಾಲಯಾಪನೆ ಮಾಡುತ್ತಿರುವ ಜನಸಮೂಹವೇ ಹೆಚ್ಚಾಗಿ ಇರುವ ರೈತಾಪಿ ಕುಟುಂಬಗಳು ಇರುವ ಭೂ ಪ್ರದೇಶ. ಯಾವ ಬೆಳೆ ಆಗದಿದ್ದರೂ ರಾಗಿ ಬೆಳೆ ಮಾತ್ರ ಅಷ್ಟೋ ಇಷ್ಟೋ ಆಗೋದಂತೂ ಗ್ಯಾರಂಟಿ ಎನ್ನೋ ನಂಬಿಕೆ ಈ ಭಾಗದ ರೈತರದ್ದು. ಬಿಸಿಲಿಗೆ ಮೈಯೊಡ್ಡಿ ದನ ಕಾಯುವ ಹುಡುಗರು ಮುಂಗಾರು ಮಳೆ ಬಿದ್ದ ಕೂಡಲೇ ಬಿರುಸಾಗಿ ತಮ್ಮ ಹೊಲವನ್ನು ಹಸನು ಮಾಡಲು ಅಣಿಯಾಗುತ್ತಾರೆ. ಕಾಡಿಗೆ ಹೊಂದಿಕೊಂಡಂತಿರುವ ಇತ್ತಲ ಹಳ್ಳಿಗಳಿಗೆ ಯಾವುದೂ ಕೊರತೆ ಇರುವುದಿಲ್ಲ. ಹಳ್ಳ ಕೊಳ್ಳದಲ್ಲಿ ಮೀನು, ಏಡಿ ಕಾಯಿ ಹಿಡಿದು ಅಲ್ಲೇ ಒಲೆ ಹೂಡಿ ಸುಟ್ಟು ತಿನ್ನುವ ಕಾಡಿನ ಸಂಸ್ಕೃತಿಗೆ ಎಲ್ಲರೂ ಒಗ್ಗಿಕೊಂಡವರೇ ಆಗಿದ್ದಾರೆ.

ಈಗಲೂ ಸೌದೆಯಿಂದಲೇ ಅಡುಗೆ ಮಾಡಿ ತಿನ್ನುವ ಜನರು ಆಹಾರದಲ್ಲಿ ರುಚಿ ಹೆಚ್ಚು ಬಯಸುತ್ತಾರೆ. ಹಾಗೆಯೇ ದೃಢಕಾಯರಾಗಿ ಬೆಳೆಯುವ ಇಲ್ಲಿನ ಯುವಕರು ಹೊಲ, ತೋಟಗಳಲ್ಲಿ ಮೈ ಬಗ್ಗಿಸಿ ದುಡಿಯುವ ಪರಿ ವರ್ಣಿಸಲು ಅಸಾಧ್ಯ. ಎಲ್ಲಾ ಕಾಲದಲ್ಲೂ ಶ್ರಮ, ಶ್ರದ್ಧೆ, ದುಡಿಮೆ ಜೊತೆಗೆ ಒಂದಷ್ಟು ಕಳ್ಳತನ, ಕಳ್ಳಬೇಟೆಗಳು, ಜಗಳಗಳು, ಬೈದಾಟ ಅಲ್ಲಲ್ಲಿ ನಡೆಯುತ್ತಾ ಸಂಸ್ಕೃತಿಯ ಭಾಗವೆಂಬಂತೆ ಬದುಕುತ್ತಿರುವ ಜನ ಈಗಲೂ ಅನ್ನವನ್ನೇ ದೇವರೆಂದು ನಂಬುವವರಾಗಿದ್ದಾರೆ.

ಮುಂಗಾರು ಗಾಳಿ ಬೀಸಿ 'ಮುಸಿಕಲ್' ನೆತ್ತಿ ಮೇಲೆ ಮಿಂಚುಟ್ಟಿದರೆ ಮಳೆ ಗ್ಯಾರಂಟಿ ಎಂದು ಹೇಳುತ್ತಿದ್ದ ಈರಣ್ಣನೂ, ನಾಟಿ ವೈದ್ಯನಾಗಿ ದನ ಕರುಗಳಿಗೆ ಧೂಳಿ ಕೊಡುವ ಪಂಡಿತರು ಇದ್ದ ಈ ಊರಲ್ಲಿ ಬೇಟೆಯನ್ನು ಚಾಚೂತಪ್ಪದೆ ಮಾಡುತ್ತಾರೆ. ಅವುಗಳಲ್ಲಿ ಮೀನು ಶಿಕಾರಿ, ಹಂದಿ ಶಿಕಾರಿ, ಮೊಲದ ಶಿಕಾರಿ ಹೀಗೆ ಹಲವು ಬೇಟೆಗಳನ್ನು ಆಡಿ ಪಳಗಿದವರೆ ಇದ್ದಾರೆ. ಅವರಲ್ಲಿ ಕೆಲವರು ಮಾತ್ರ ಬದುಕುಳಿದಿರುವ ಹಳೆ ತಲೆಗಳ ಪೈಕಿಯ ಹತ್ತಿಪ್ಪತ್ತು ಜನರ ತಲೆ ನರೆತರೂ ಮೊದಲ ಮುಂಗಾರು ಮಳೆ ಬಿದ್ದ ದಿವಸ ಇಲಿ ಬೇಟೆಯಾಡುವುದನ್ನು ಮರೆಯುವುದಿಲ್ಲ. ಇಲಿ ಬೇಟೆಯಾಡುವುದೆಂದರೆ ಬುಡಕಟ್ಟು ಅಲೆಮಾರಿ ಸಮುದಾಯ ತನ್ನ ಹೊಟ್ಟೆಪಾಡಿಗಾಗಿ ಕಂಡುಕೊಂಡ ಬೇಟೆ ತುಂಬಾ ಪ್ರಾಚೀನವಾದುದು. ಬಿಲಗಳಿಗೆ 'ಹೂದಲು' ಹಾಕಿ ಬಿಲದಲ್ಲಿದ್ದ ಇಲಿಗಳು ಉಸಿರುಕಟ್ಟು ಸಾಯಿಸುವ ತಿಳಿವಳಿಕೆಯು ತುಂಬಾ ಹಳೆಯದು. ಕಾಡಂಚಿನ ಊರುಗಳು ಕಾಡುಪ್ರಾಣಿಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಬದುಕುವ ಅನಿವಾರ್ಯತೆ ಎಲ್ಲಾ ಕಾಲದಲ್ಲಿಯೂ ಇದ್ದೇ ಇದೆ.

ಆಗ ನಾವಿನ್ನೂ ಬಾಲಕರು. ಆ ವರ್ಷ ಒಂದು ದಿನ ಭಾರೀ ಮಳೆ ಯುಗಾದಿ ತೀರಿದ ಮೂರು ದಿನಕ್ಕೆ ಚಚ್ಚಿಹೋಯಿತು. ಮಳೆ ಸುರಿದ ರಭಸಕ್ಕೆ ಕೆರೆ ಕಟ್ಟೆ ಎಲ್ಲ ಕೋಡಿಯಾದವು. ಊರೇ ನೀರಿನಲ್ಲಿ ತೇಲುವಂತೆ ಆಯಿತು. ಸಣ್ಣಪುಟ್ಟ ಕಟ್ಟೆಗಳು ಮದನಾಡಿದವು. ಸಣ್ಣ ಪುಟ್ಟ ಹೈಕಳು ಕೋಡಿಯಾದ ಜಾಗದಲ್ಲಿ ಮೀನು ಹಿಡಿಯಲು ಹೊರಟರೆ, ಕೇಂಡೆ ಗೌಡರ ಪೈಕಿ 'ಮರಿಯ' ಮತ್ತು ಸಂಗಡಿಗರು ಹಾರೆ, ಗುದ್ದಲಿ, ಪಿಕಾಸಿ ಸಮೇತ ಹೊಲ ಬಯಲು ಕಡೆ ಇಲಿ ಶಿಕಾರಿಗೆ ಹೊರಟರು. ಅಂದು ನಡು ಮಧ್ಯಾಹ್ನಕ್ಕೇ ಮಳೆ ಸುರಿದು ಹೋಗಿ ಮೋಡದಲ್ಲಿ ಮೂಡಿದ ಕಾಮನಬಿಲ್ಲು ಕಾಂತಿ ಹಳ್ಳಿ ಮಕ್ಕಳ ಕುತೂಹಲವನ್ನು ಹೆಚ್ಚಿಸುತ್ತಿದ್ದರೆ ಮಳೆಯಿಂದ ಆದ ಹಾನಿಯನ್ನು ತಕ್ಷಣವೇ ಎಚ್ಚೆತ್ತುಕೊಂಡು ಮಾಳಿಗೆ, ಸಡ್ಡು, ಹೆಂಚು ಮನೆಗಳ ಮೇಲೆ ಹತ್ತಿ ಸೋರುವ ಕಡೆ ತಾತ್ಕಾಲಿಕವಾಗಿ ಟಾರ್ಪಲ್ ಹಾಕಿ ಸರಿಪಡಿಸಿಕೊಳ್ಳುತ್ತಿದ್ದ ಜನ ಮನೆ ಮೇಲೆ ನಿಂತು ಇಲಿ ಬೇಟೆಯಾಡುವುದನ್ನೇ ನೋಡುತ್ತಿದ್ದರು. ಇದು ಪ್ರತಿ ವರ್ಷದ ಮೊದಲ ಮಳೆಗೆ ನಡೆಯುತ್ತಿದ್ದ ಮೊದಲ ಬೇಟೆಯಾಗಿರುತ್ತಿತ್ತು. ನಾನೂ ಖುಷಿಯಿಂದ ಬೇಟೆಗಾರರ ಬೆನ್ನು ಹತ್ತಿದೆ. ಹತ್ತು ಜನರ ಗುಂಪಿನಲ್ಲಿ ಮರಿಯನೆ ಹಿರಿಯ. ಕಟ್ಟುಮಸ್ತಾದ ಆಳು. ಯಾವ ಇಲಿ ಎಲ್ಲಿ ವಾಸ ಮಾಡುತ್ತದೆಂದು ತನ್ನ ಕಾಲು ನಡಿಗೆಯಿಂದಲೇ ಕಂಡುಕೊಂಡಿದ್ದ. ನಡೆದು ನಡೆದೂ ಊರ ತುಂಬಾ ಇದ್ದ ಇಲಿ ಬಿಲಗಳ ಬಗ್ಗೆ ಖಚಿತವಾದ ಮಾಹಿತಿ ಈತನಿಗೆ ಇತ್ತು. ಹೊಲಬಯಲನ್ನು ಕಣ್ಣಲ್ಲೇ ಸರ್ವೇ ಮಾಡುವವನಂತೆ ಇದ್ದ. ಸುಗ್ಗಿಯ ಕಾಲದಲ್ಲಿ ರಾತ್ರಿ ಹೊತ್ತು ಹಣೆಗೆ ಬ್ಯಾಟರಿ ಹಾಕ್ಕೊಂಡು ಹುಲ್ಲು ಮೆದೆಯ ತಳಭಾಗದಲ್ಲಿ ರಾಗಿ ತೆನೆಯನ್ನು ತಿನ್ನಲು ಬರುತ್ತಿದ್ದ ಇಲಿಗಳ ರಾಶಿಯನ್ನೇ ಬೇಟೆಯಾಡಿ ನಿಸ್ಸೀಮನಾಗಿದ್ದ. ಮಳೆ ಬಿದ್ದ ಆ ದಿವಸ ಹೊಲ ಮಾಳದಲ್ಲಿ ಈತ ಯಾವುದೇ ಇಲಿಯ ಬಿಲಕ್ಕೆ ಕಡ್ಡಿ ಚುಚ್ಚಿ ಇಲಿಯನ್ನು ಎಬ್ಬಿಸಿದರೆ ಒಂದೇ ಸಾರಿ ಹತ್ತಾರು ಇಲಿಗಳು ದಿಕ್ಕಾಪಾಲಾಗಿ ಓಡುತ್ತಿದ್ದವು. ಆ ಓಟದಲ್ಲಿ ಕೆಲವಾದರೂ ಇವನ ಕಣ್ಣಿಂದ ತಪ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಜೊತೆಗೆ ಇವನ ಜೊತೆ ಇದ್ದ ಹತ್ತು ಜನರೂ ಅಟ್ಟಾಡಿಸಿ ಇಲಿಯನ್ನು ಕೆಲವು ಸಾರಿ ಕಾಲಲ್ಲೇ ತುಳಿದು ಅವುಗಳಿಗೆ ಒಂದು ಗತಿ ಕಾಣಿಸುತ್ತಿದ್ದರು. ಕೆಲವು ಇಲಿಗಳು ಬಿಲಕ್ಕೆ ನುಗ್ಗಿದ ನೀರು ಕುಡಿದು ನಿತ್ರಾಣವಾಗಿ ಇಲಿ ನುಂಗಿದ ಹಾವಿನಂತೆ ಓಡಲು ಆಗದೆ ಬಹು ಬೇಗ ಸುಸ್ತಾಗಿ ತನ್ನ ಕೊರಳನ್ನು ಬೇಟೆಗಾರನ ಕೈಗೆ ಒಪ್ಪಿಸಿ ಶರಣಾಗುತ್ತಿದ್ದವು. ನಾನು ಮಾತ್ರ ಇದನ್ನು ಒಂದು ಆಟವೆಂಬಂತೆ ನೋಡುತ್ತಿದ್ದೆ. ಗಣೇಶನ ವಾಹನವಾದ ಇಲಿಯ ಪಾಡು ಪಾಪ ಅಯ್ಯೋ ಎನಿಸುತ್ತಿತ್ತು. ಕಷ್ಟಕ್ಕೀಡಾಗುವ ಇಂತಹ ಸಮಯದಲ್ಲಿ ಇಲಿಯನ್ನು ದೊಡ್ಡ ಹೊಟ್ಟೆಯ ಗಣೇಶ ಬಂದು ಕಾಪಾಡಬಾರದೇಕೆ ಎಂದು ಅನಿಸುತ್ತಿತ್ತು!



ಊರಂಚಿನ ಬೀಳು ಹೊಲದಲ್ಲಿ ಎಲ್ಲೆಂದರಲ್ಲಿ ಬಿಲ ಕೊರೆದು ಮಣ್ಣ ಗುಡ್ಡೆ ಮಾಡಿದ ಆ ಹೊಲವನ್ನು ಬಹುದಿನಗಳಿಂದಲೇ ನೋಡಿಕೊಂಡಿದ್ದ 'ಮರಿಯ' ಆ ವರ್ಷ ಮಳೆ ಬೀಳುವುದನ್ನೇ ಕಾಯುತ್ತಿದ್ದವನಂತೆ ಮೊದಲ ಮಳೆ ಬಿದ್ದು ರಭಸವಾಗಿ ಕೊಳ್ಳೆಕ್ಕೆಯಲ್ಲಿ ನೀರು ಚೆಲ್ಲಾಡುತ್ತಿತ್ತು. ಆ ದಿನ ಮರಿಯ ಕೆಲವು ಚಿರಪರಿಚಿತ ಬಿಲಗಳಿಗೆ ತಾನೇ ಕೈ ಹಾಕಿ ಇಲಿಗಳ ಹೊರಗೆಳೆದು ಬಾಲ ಹಿಡಿದು ನೆಲಕ್ಕೆ ರಪ್ ಅಂತ ಒಗೆದು ಪ್ರಾಣ